ಕರ್ನಾಟಕ ಸರ್ಕಾರ

ಪೊಲೀಸ್ ಇಲಾಖೆ

ಪೊಲೀಸ್ ಆಯುಕ್ತರ ಕಛೇರಿ,

ಮೈಸೂರು ನಗರ.

ದೂರವಾಣಿ ಸಂ. 0821–2418303 / 2418103

## ಮೈಸೂರು ನಗರ ನಾಗರೀಕ ಬಂದೂಕು ತರಬೇತಿ ಸಂಘ (ರಿ.)

ಮೈಸೂರು ನಗರ ನಾಗರೀಕ ಬಂದೂಕು ತರಬೇತಿ ಸಂಘವನ್ನು ದಿನಾಂಕ: 23.12.2014 ರಂದು ಸ್ಥಾಪಿಸಲಾಗಿದೆ. ಸಂಘವನ್ನು ಕರ್ನಾಟಕ ಸಹಕಾರ ನೊಂದಣಿ ಕಾಯಿದೆ 1960ರ ನಿಯಮದನ್ವಯ ನೊಂದಾಯಿಸಲಾಗಿದೆ. M.C.C.R.A. ನಾಗರೀಕ ಬಂದೂಕುಗಳನ್ನು ರಕ್ಷಣಾತ್ಮಕವಾಗಿ ಉಪಯೋಗಿಸಲು, ಗುರಿ ಅಭ್ಯಾಸದಲ್ಲಿ ಉಪಯೋಗಿಸುವ ಹಲವು ತಂತ್ರಗಳು ಹಾಗೂ ಬಂದೂಕು ಉಪಯೋಗಿಸಲು ತಿಳಿದು ಕೊಳ್ಳಬೇಕಾದ ನಿಯಮಗಳ ಬಗ್ಗೆ ತರಬೇತಿಯನ್ನು ನೀಡಲಾಗುವುದು. ಸಂಘವು ಮೈಸೂರು ನಗರದ ನಾಗರೀಕರು ಬಂದೂಕು ಉಪಯೋಗಿಸುವ ಕಲೆ ಹಾಗೂ ಉತ್ತಮ ಗುರಿ, ಆರೋಗ್ಯಕರ ಕ್ರೀಡೆ, ಸ್ವಯಂ ರಕ್ಷಣೆ ಮಾಡಿಕೊಳ್ಳುವ ಬಗ್ಗೆ ಉತ್ತಮ ತರಬೇತಿ ನೀಡುವ ದೈಯೋದ್ದೇಶವನ್ನು ಹೊಂದಿದೆ. ಅಲ್ಲದೇ ಬಂದೂಕು ಪರವಾನಗಿ ಹೊಂದಲು ಈ ತರಬೇತಿಯು ಕಡ್ಡಾಯವಾಗಿರುತ್ತದೆ.

## CRTC ತರಬೇತಿಯ ಬಗ್ಗೆ ಮಾಹಿತಿ ಮತ್ತು ಅಧಿವೇಶನಗಳು

ಪ್ರತಿ ತರಬೇತಿಯು ಒಂದು ವಾರದ ಅವಧಿಯಾಗಿರುತ್ತದೆ. ತರಭೇತಿ ಸೋಮವಾರದಿಂದ ಭಾನುವಾರದವರೆಗೆ ಒಂದು ವಾರ ಬೆಳಿಗ್ಗೆ 07.00AM ನಿಂದ 08.30AM ವರೆಗೆ ನಡೆಸಲಾಗುವುದು. ತರಬೇತಿಯಲ್ಲಿ ಸ್ವಯಂ ರಕ್ಷಣೆ ಮಾಡಿಕೊಳ್ಳುವ ದೈಯೋದ್ದೇಶದಿಂದ ಮೂರು ಮಾದರಿಯ ಫೈರಿಂಗ್, ಆಯುಧಗಳ ರಕ್ಷಣೆ, ಬಂದೂಕುಗಳ ನಿರ್ವಹಣೆ ಮತ್ತು ಸ್ವಚ್ಛತೆ ಬಗ್ಗೆ ತರಬೇತಿ ನೀಡಲಾಗುವುದು. ತರಬೇತಿ ಪೂರ್ಣಗೊಂಡ ನಂತರ ಯಶಸ್ವಿಯಾಗಿ ತರಬೇತಿ ಪೂರ್ಣಗೊಳಿಸಿದ ಬಗ್ಗೆ ಪ್ರಮಾಣ ಪತ್ರ ನೀಡಲಾಗುವುದು.





# <u>ಸದಸ್ಯತ್ವದ ಬಗ್ಗೆ ಮಾಹಿತಿ</u>

1. ನಿಗಧಿಪಡಿಸಿದ ಶುಲ್ಕದೊಂದಿಗೆ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ, ಆಧಾರ್‌ಕಾರ್ಡ್ ನೊಂದಣಿ ಅರ್ಜಿಯನ್ನು ಭರ್ತಿ ಮಾಡಿ ಸಲ್ಲಿಸುವುದು.
2. ಸದಸ್ಯರಿಗೆ ತರಬೇತಿಗಾಗಿ ಪ್ರವೇಶ ನೀಡುವ ಮೊದಲು ಸಂಬಂಧಪಟ್ಟ ಪೊಲೀಸ್ ಠಾಣೆಯಿಂದ ಪೊಲೀಸ್ ಪರಿಶೀಲನಾ ವರದಿ ಪಡೆಯಲಾಗುವುದು.
3. ಅರ್ಜಿದಾರರು ಹೆಚ್ಚುವರಿ ಮಾಹಿತಿಗಾಗಿ ಉಪಪೊಲೀಸ್ ಆಯುಕ್ತರು, ನಗರ ಸಶಸ್ತ್ರ ಮೀಸಲುಪಡೆ, ಮೈಸೂರು ನಗರ ರವರನ್ನು ದೂರವಾಣಿ ಸಂಖ್ಯೆ: 0821–2418303, 24181103ಗೆ ಸಂಪರ್ಕಿಸ ಬಹುದು.